# 23-04-2026

# "CO-CURRICULAR ACTIVITIES 2025-26

# VALEDICTORY"






VIDYAVARDHAKA SANGHA (R), Mysuru
VIDYAVARDHAKA FIRST GRADE COLLEGE
Sheshadri Iyer Road, Mysuru – 01
Welcomes you to
VALEDICTORY OF
CO-CURRICULAR ACTIVITIES 2025-26
Prof. Prathima D S


VALEDICTORY OF
CO-CURRICULAR ACTIVITIES 2025-




VIDYAVARDHAKA SANGHA (R), Mysuru
VIDYAVARDHAKA FIRST GRADE COLLEGE
Sheshadri Iyer Road, Mysuru – 01
Welcomes you to
VALEDICTORY OF
CO-CURRICULAR ACTIVITIES 2025-26
Chief Guest
Prof. Prathima D S
Date : 23.04.2026, Thursday
Time: 3.00 P.M.
Prof. Lavanya S
Dr. S MariGowda
Prof. Prathima D S
P Vishwanath
Sri. Srishaila Ramannavar

ಶಿಕ್ಷಣವೆಂದರೆ ಪಠ್ಯಪುಸ್ತಕಗಳಲ್ಲಿ ಇರುವ ವಿಷಯಗಳನ್ನು ಕಲಿಯುವುದಷ್ಟೇ ಅಲ್ಲ. ವಿದ್ಯಾರ್ಥಿಗಳಲ್ಲಿರುವ ಸೃಜನಶೀಲತೆ, ವ್ಯಕ್ತಿತ್ವವನ್ನು ಅಭಿವ್ಯಕ್ತ ಪಡಿಸಲು ಇರುವ ಉತ್ತಮ ವೇದಿಕೆಯೇ ಸಹಪಠ್ಯ ಚಟುವಟಿಕೆ ಎಂದು ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿನಿರ್ದೇಶಕರಾದ ಪ್ರೊ.ಪ್ರತಿಮಾ.ಡಿ.ಎಸ್. ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಪ್ರಸಕ್ತ ಶೈಕ್ಷಣಿಕ ವರ್ಷದ ಸಹಪಠ್ಯ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದ ಅವರು ವಿದ್ಯಾರ್ಥಿಯ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ರೂಪಿಸುವ ಪ್ರಕ್ರಿಯೆಯೇ ನಿಜವಾದ ಶಿಕ್ಷಣ. ಆ ವ್ಯಕ್ತಿತ್ವ ವಿಕಾಸದಲ್ಲಿ ಸಹಪಠ್ಯ ಚಟುವಟಿಕೆಗಳಾದ ಕ್ರೀಡೆ, ಸಂಗೀತ, ನೃತ್ಯ, ಪ್ರಬಂಧ, ನಾಟಕ ಇಂತಹ ಹಲವು ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆಯನ್ನು ಹೊರತರುವಲ್ಲಿ ಇದು ಸಹಕಾರಿ ಎಂದ ಅವರು ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಅಂಕಗಳಿಂದ ಜೀವನದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯವಿಲ್ಲ. ಸಂವಹನ ಕೌಶಲ್ಯ, ಆತ್ಮವಿಶ್ವಾಸ ಮತ್ತು ಸೃಜನಶೀಲತೆ ಇವೆಲ್ಲವೂ ಅಗತ್ಯವಾಗಿದ್ದು ಈ ಎಲ್ಲಾ ಗುಣಗಳನ್ನು ಬೆಳೆಸಲು ಉತ್ತಮ ವೇದಿಕೆಯೇ ಸಹಪಠ್ಯ ಚಟುವಟಿಕೆಯಾಗಿದೆ. ಕ್ರಿಡಾ ವಿಭಾಗದ ಯಾವುದೇ ಪಂದ್ಯದಲ್ಲಿ ಭಾಗವಹಿಸಿದಾಗ ಅಲ್ಲಿ ಸೋಲು, ಗೆಲುವು ಮುಖ್ಯವಾಗುವುದಿಲ್ಲ ಬದಲಿಗೆ ಭಾಗವಹಿಸುವಿಕೆಯೇ ಪ್ರಮುಖ. ಬ್ಯಾಂಕಾಕ್‌ನಲ್ಲಿ ಇತ್ತೀಚೆಗೆ ಜರುಗಿದ ವಿಶ್ವ ಆರ್ಚೆರಿ ಪಂದ್ಯಾವಳಿಯಲ್ಲಿ ಓರಿಸ್ಸಾದ ವಿಶಿಷ್ಟ ಚೇತನ ಪಾರುಲ್‌ನಾಗ್ ಭಾಗವಹಿಸಿ ಚಿನ್ನದ ಪದಕ ಗಳಿಸಿದ್ದಾರೆ. ಇದು ಎಂಥವರಿಗೂ ಸ್ಪೂರ್ತಿದಾಯಕವಾದ ಬೆಳವಣಿಗೆಯಾಗಿದೆ. ಆದುದರಿಂದ ಯಾರೇ ಆದರೂ ಜೀವನದಲ್ಲಿ ಸ್ಪಷ್ಟವಾದ ಗುರಿಯನ್ನಿಟ್ಟುಕೊಂಡು ಆಸಕ್ತಿಯಿಂದ ಮುಂದುವರೆದಾಗ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ. ವಿದ್ಯಾರ್ಥಿ ಮಿತ್ರರೇ ನಿಮ್ಮಲ್ಲಿರುವ ಅಪಾರವಾದ ಶಕ್ತಿಯನ್ನು ಉಪಯೋಗಿಸಿಕೊಂಡು ನಿಮ್ಮ ಕನಸುಗಳನ್ನು ಈಡೇರಿಸಿಕೊಳ್ಳುವ ಮೂಲಕ ಯಶಸ್ವಿ ಬದುಕನ್ನು ರೂಪಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಕಾಲೇಜು ಕೇವಲ ಶಿಕ್ಷಣಕ್ಕೆ ಮಹತ್ವ ನೀಡದೇ ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಅಗತ್ಯವಾದ ದೈಹಿಕ, ಮಾನಸಿಕ, ನೈತಿಕ ಮೌಲ್ಯಗಳಿಗೆ ಮಹತ್ವ ನೀಡುತ್ತಿದ್ದು, ವಿದ್ಯಾರ್ಥಿಗಳು ಏನನ್ನೇ ಕಲಿತರು ಅದನ್ನು ಬದುಕಿಗೆ ಅಳವಡಿಸಿಕೊಂಡು ಮುಂದುವರಿಯಬೇಕು. ವಿಶ್ವವಿದ್ಯಾನಿಲಯಗಳು ಕೇವಲ ಜ್ಞಾನ ಮತ್ತು ನಡತೆಯನ್ನು ಕಲಿಸದೆ ದೈನಂದಿನ ಬದುಕಿಗೆ ಅವಶ್ಯಕವಾದ ಜೀವನ ಕೌಶಲ್ಯಗಳನ್ನು ಕಲಿಸುವ ಮೂಲಕ ವಿದ್ಯಾರ್ಥಿಗಳ ಬದುಕು ಹಸನಾಗಿಸುವ ನಿಟ್ಟಿನಲ್ಲಿ ಹೆಜ್ಜೆಯಿಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಗೌ॥ ಕಾರ್ಯದರ್ಶಿ ಪಿ.ವಿಶ್ವನಾಥ್ ಮಾತನಾಡುತ್ತಾ ಅಂತಿಮ ವರ್ಷದ ವಿದ್ಯಾರ್ಥಿಗಳು ತಮ್ಮ ಪದವಿ ವಿದ್ಯಾಭ್ಯಾಸವನ್ನು ಮುಗಿಸಿ ಸಮಾಜಕ್ಕೆ ಪ್ರವೇಶಿಸುತಿದ್ದೀರಿ, ಸಮಾಜದಲ್ಲಿ ನಿಮ್ಮ ಮುಂದೆ ಹಲವು ಸವಾಲುಗಳು ಎದುರಾಗಲಿದ್ದು ಅವುಗಳ'ನ್ನು ನಿಮ್ಮ ಕೌಶಲ್ಯ ಹಾಗೂ ಧೈರ್ಯದಿಂದ ಎದುರಿಸಿ ಉತ್ತಮ ಜೀವನವನ್ನು ಕಟ್ಟಿಕೊಳ್ಳಿ ಎಂದು ಕರೆ ನೀಡಿದರು. ಇದೇ ವೇಳೆ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಪಠ್ಯೇತರ ಹಾಗೂ ಕ್ರೀಡೆಗಳಲ್ಲಿ ಉತ್ತಮ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕು.ಅರ್ಪಣ.ಡಿ.ಎಸ್. ಪ್ರಾರ್ಥಿಸಿ, ಅಧ್ಯಾಪಕ ಸಲಹೆಗಾರರಾದ ಪ್ರೊ.ಲಾವಣ್ಯ ಸ್ವಾಗತಿಸಿದ ಕಾರ್ಯಕ್ರಮದಲ್ಲಿ ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಟಿ.ನಾಗರಾಜು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು. ಪ್ರೊ.ವಿದ್ಯಾ.ಆರ್ ನಿರೂಪಿಸಿದ ಕಾರ್ಯಕ್ರಮವನ್ನು ಪ್ರೊ.ಚಂದನ್ ವಂದಿಸಿದರು.


VALEDICTORY OF
CO-CURRICULAR ACTIVITIES 2025


VALEDICTORY OF
CO-CURRICULAR ACTIVITIES 2025-2










VALEDICTORY


TIVITIES 2025-26


VALEDICTORY OF
CO-CURRICULAR ACTIVITIES 2025-26


Sheshadri Iyer Road, Mysuru – 01
Date : 23.04.2026, Thursday
Time: 3.00 P.M.


VIDYAVARDHAKA FIRST GRADE COLLEGE
Sheshadri Iyer Road, Mysuru – 01


VIDYAVARDHAKA FIRST GRADE COLLEGE
Sheshadri Iyer Road, Mysuru – 01




VALEDICTORY OF
CO-CURRICULAR ACTIVITIES 2025-26


VIDYAVARDHAKA SANGHA (R), Mysuru
VIDYAVARDHAKA FIRST GRADE COLLEGE
Sheshadri Iyer Road, Mysuru – 01
Welcomes you to
VALEDICTORY OF
CO-CURRICULAR ACTIVITIES 2025-26
Prof. Prathima D S
















Date : 23.04.2026, Thursday
Time: 3.00 P.M.












VIDYAVARDHAKA SANGHA (R), Mysuru
VIDYAVARDHAKA FIRST GRADE COLLEGE
Sheshadri Iyer Road, Mysuru – 01




Dr. S MariGowda
Prof. Prathima D S
Srishaila Ramannavar








Welcomes you to
VALEDICTORY
CO-CURRICULAR ACTIVIT



